4 ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸ್ಪೇಷಲ್ ನ್ಯಾಯಾಧೀಶರು (ಪಿಸಿಎ) ಬೆಳಗಾವಿ ಇವರ ನ್ಯಾಯಾಲಯದಲ್ಲಿ
ಮುಕ್ಕಾಂಃ ಬೆಳಗಾವಿ.

ಸ್ಪೇಷಲ್ ಕೇಸ್ ನಂಃ 239/2022
ಫ್ರಾಸಾಃ 6
ಆ ಸಾಃ 7

ಸಾಕ್ಷಿಯ ಹೆಸರುಃ ಆನಂದ ಗುರುನಾಥ ಪತ್ತಾರ

ತಂದೆಯ ಹೆಸರುಃ ಗುರುನಾಥ ಪತ್ತಾರ

ವಯಸ್ಸುಃ 45 ವರ್ಷ

ಉದ್ಯೋಗಃ ವಿನಾಯಕ ಜುವೆಲರ್ಸ ಅಂಗಡಿ

ವಾಸ್ತವ್ಯಃ ಚೆನ್ನಮ್ಮನ ಕಿತ್ತೂರ, ಬೆಳಗಾವಿ

ದಿನಾಂಕಃ 16-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ದಿನಾಂಕ 20.03.2020 ರಂದು ನಾನು ಕಿತ್ತೂರಿನ ಕಾಲೇಜ ರೋಡನಲ್ಲಿರುವ ನನ್ನ ವಿನಾಯಕ ಜುವೆಲರ್ಸನಲ್ಲಿ ಇದ್ದಾಗ ಬೆಳಿಗ್ಗೆ 08.30 ಗಂಟೆಗೆ ಪೊಲೀಸ ಚೇತನ ಬುದನಿ ಎನ್ನುವರು ನನಗೆ ಸಿಪಿಐ ರವರು ಪೋಲೀಸ ಠಾಣೆಗೆ ಒಂದು ದರೋಡೆ ಕೇಸಿನ ಚಿನ್ನವನ್ನು ತೂಕ ಮಾಡಲು ಕರೆಯುತ್ತಿದ್ದರು ಎಂದು ಹೇಳಿದರು. ಆಕಾರಣ ನಾನು ಚಿನ್ನ, ಬೆಳ್ಳಿ ತೂಕ ಮಾಡುವ ಎಲೆಕ್ಟ್ರಾನಿಕ ಡಿಜಿಟಲ್ ಮಶೀನನ್ನು ತೆಗೆದುಕೊಂಡು ಕಿತ್ತೂರಿನ ಸಿಪಿಐರವರ ಠಾಣೆಗೆ ಹೊದೆನು. ಆಗ 3 ಜನ ಆರೋಪಿತರು ಇದ್ದರು. ಸಾಕ್ಷಿಯು ನ್ಯಾಯಾಲಯದ ಮುಂದೆ ಇದ್ದ 2 ಮತ್ತು 3 ನೇ ಆರೋಪಿತರನ್ನು ತೋರಿಸಿ ಇವರು ಅಲ್ಲಿ ಪೊಲೀಸ ಠಾಣೆಯಲ್ಲಿ ಇದ್ದರು ಇನ್ನೊಬ್ಬರು ಇದ್ದರು ಅವರು

ಯಾರು ಎಂದು ನನಗೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ಸಾಕ್ಷಿಯು ಪುನಃ ನ್ಯಾಯಾಲಯ ಮುಂದೆ ಇದ್ದ 1 ನೇ ಆರೋಪಿಯನ್ನು ತೋರಿಸಿ ಅವರು ಇದ್ದರು ಎಂದು ಹೇಳುತ್ತಾರೆ. ನಾನು ಅಲ್ಲಿ ಪೊಲೀಸ ಠಾಣೆಗೆ ಹೋದಾಗ 3 ಮೊಬೈಲ ಹ್ಯಾಂಡ ಸೇಟಿ ಮತ್ತು ಒಂದು ಮೋಟರ ಸೈಕಲ ಇತ್ತು, ಒಂದು ಬಂಗಾರದ ಚೈನು ಇತ್ತು. ಸಿಪಿಐ ರವರು ನನಗೆ ಬಂಗಾರದ ಚೈನನ್ನು ತೂಕ ಮಾಡಿ ಅದರ ತೂಕ ಮತ್ತು ಮೌಲ್ಯವನ್ನು ಹೇಳಿದಾಗ ನಾನು ಡಿಜಿಟಲ್ ಎಲೆಕ್ಟ್ರಿಕಲ ತೂಕದ ಮಶೀನಿಂದ ಆ ಬಂಗಾರದ ಚೈನನ್ನು ತೂಕ ಮಾಡಿದಾಗ ಅದು 10 ಗ್ರಾಂ ಇತ್ತು ಅದರ ಮೌಲ್ಯ ರೂ.41,000/- ಆಗಿರುತ್ತದೆ. ಆ ಚೈನನಲ್ಲಿ ಗಣಪತಿ ಲಾಕೇಟ ಇತ್ತು. ನನಗೆ ಈಗ ತೋರಿಸಿದ ನಿಪಿ 42 ಮತ್ತು 43 ಫೊಟೋದಲ್ಲಿ ಕಾಣುವ ಬಂಗಾರದ ಚೈನನ್ನು ಆ ದಿನ ತೂಕ ಮಾಡಿದ್ದು. ನಿಪಿ 43 ಫೊಟೋದಲ್ಲಿ ಕಾಣುವ ತೂಕದ ಮಶೀನ ನನ್ನದು.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ಕಿತ್ತೂರು ಪೊಲೀಸ ಠಾಣೆಯಿಂದ ನನ್ನ ಅಂಗಡಿಗೆ ಬರಬೇಕಾದರೆ 4-5 ಪತ್ತಾರ ಅಂಗಡಿಗಳು ಸಿಗುತ್ತವೆ ಎಂದರೆ ನಿಜ. ನಾನು ಕಿತ್ತೂರು ಪೊಲೀಸ ಠಾಣೆಗೆ ಪತ್ತಾರ ಕೆಲಸಕ್ಕೆ ಖಾಯಂ ಹೋಗುತ್ತೇನೆ ಎಂದರೆ ಸರಿಯಲ್ಲ. ನಾನು ಈ ಕೇಸನ್ನು ಹೊರತು ಪಡಿಸಿ ಬೇರೆ ಕೇಸುಗಳಲ್ಲಿ ಕಿತ್ತೂರು ಠಾಣೆಗೆ ಹೋಗಿಲ್ಲ. ಚೇತನ ಬುದನಿ ಪೊಲೀಸ ನಿಮ್ಮ ಸ್ನೇಹಿತ ಎಂದರೆ ಸಾಕ್ಷಿಯು ಅವರು ನನ್ನ ಪರಿಚಯರಸ್ಥರು ಎನ್ನುತ್ತಾರೆ. ಚೇತನ ಬುದನಿ ಇವರೆ ನನ್ನನ್ನು ಪೊಲೀಸ ಠಾಣೆಗೆ ಕರೆದುಕೊಂಡು ಹೋಗಿದ್ದರು ಎಂದರೆ ನಿಜ. ಬಂಗಾರ ತೂಕ ಮಾಡಿಕೊಡುವಂತೆ ನನಗೆ ಕಿತ್ತೂರು ಪೊಲೀಸ ಠಾಣೆಯಿಂದ ನೋಟಿಸ ಕೊಟ್ಟಿಲ್ಲ

ಎಂದರೆ ನಿಜ. ನಾನು ಪ್ರತಿ ದಿನ ಅಂಗಡಿಯನ್ನು ಬೆಳಿಗ್ಗೆ 08.00 ಗಂಟೆಗೆ ತೆರೆಯುತ್ತೇನೆ. ನನಗೆ ಚಿನ್ನ, ಬೆಳ್ಳಿ ವ್ಯಾಪಾರ ಮಾಡುವ ಲೈಸೆನ್ಸ ಇದೆ. ಆ ಲೈಸೆನ್ಸ ಪ್ರತಿಯನ್ನು ನಾನು ಕಿತ್ತೂರ ಪೊಲೀಸರಿಗೆ ಕೊಟ್ಟಿಲ್ಲ. ನಾನು ಪೊಲೀಸ ಚೇತನ ಜೊತೆ ಕಿತ್ತೂರ ಸಿಪಿಐ ಕಚೇರಿಗೆ ಹೊದೆನು. ಪೊಲೀಸರು ನನಗೆ ಬಂಗಾರದ ಚೈನು ತೂಕ ಮಾಡುವುದಿದೆ ಬಾ ಎಂದು ಕರೆದ ಕಾರಣ ಮಾತ್ರ ನಾನು ಹೋಗಿದ್ದೆನೆಂದರೆ ನಿಜ. ಯಾವ ವಸ್ತುಗಳನ್ನು ಯಾರು ದರೋಡೆ ಮಾಡಿದರು, ಯಾರಿಂದ ವಸ್ತುಗಳನ್ನು ಜಪ್ತು ಮಾಡಲಾಯಿತೆಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಸಿಪಿಐ ರವರು ನನ್ನ ಹೇಳಿಕೆ ಪಡೆದಿಲ್ಲ. ನನ್ನ ಜುವೆಲರಿ ಶಾಪನಲ್ಲಿ ಯಾರಾದರೂ ಚಿನ್ನ, ಬೆಳ್ಳಿ ಖರೀದಿ ಮಾಡಿದರೆ ನಾನು ರಸಿದಿ ಕೊಡುತ್ತೇನೆಂದರೆ ನಿಜ. ನಾನು ಚಿನ್ನ ತೂಕ ಮಾಡಿಕೊಟ್ಟ ಬಗ್ಗೆ ಪೊಲೀಸರಿಗೆ ಪ್ರಮಾಣ ಪತ್ರ ಕೊಟ್ಟಿಲ್ಲ ಎಂದರೆ ನಿಜ. ಸಾಕ್ಷಿಯು ನಾನು ಒಂದು ಹಾಳೆಯಲ್ಲಿ ನಾನು ತೂಕ ಮಾಡಿದ ಚಿನ್ನ 10 ಗ್ರಾಂ ಇದೆ ಎಂದು ಅದರ ಮೌಲ್ಯ ರೂ.41,000/- ಎಂದು ಹಾಳೆಯಲ್ಲಿ ಬರೆದುಕೊಟ್ಟಿದೆನೆ ಎನ್ನುತ್ತಾರೆ. ನಾನು ಆ ರೀತಿ ಬರೆದು ಕೊಟ್ಟ ಹಾಳೆಯಲ್ಲಿ ನನ್ನ ಅಂಗಡಿಯ ಲೇಟರ ಹೇಡ್ ಇತ್ತು. ಯಾರಾದರು ನಮ್ಮ ಅಂಗಡಿಯಲ್ಲಿ ಚಿನ್ನ, ಬೆಳ್ಳಿ ಖರೀದಿ ಮಾಡಿದರೆ ಅವರಿಗೆ ಬಿಲ್ಲು ಕೊಟ್ಟು ಅವರಿಂದ ಹಣ ಪಡೆದ ಬಗ್ಗೆ ಪೇಡ್ ಎಂದು ಬರೆದು ಕೊಡುತ್ತೇವೆಂದರೆ ನಿಜ. ನನಗೆ ಈಗ ತೋರಿಸಿದ ದೋಷಾರೋಪಣ ಪತ್ರದ ಪುಟ ಸಂಖ್ಯೆ 61 ರಲ್ಲಿರುವ ರಸೀದಿ ನಾನೇ ಕೊಟ್ಟಿದ್ದೆ ಎಂದರೆ ನಿಜ. ಸಾಕ್ಷಿಯು ಆ ರಸೀದಿಯನ್ನು ಗುರುತಿಸಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ1 ರಲ್ಲಿ ಪೇಡ್ ಎಂದು ಬರೆಯಲಾಗಿದೆ ಎಂದರೆ ನಿಜ. ದಿನಾಂಕ

20.03.2020 ರಂದು ಹೊಸ ಬಂಗಾರದ ಚೈನನ್ನು ನಮ್ಮ ಅಂಗಡಿಯಿಂದ ಖರೀದಿ ಮಾಡಿದ್ದರಿಂದ ನಿಡಿ1 ರಲ್ಲಿ ಪೇಡ್ ಎಂದು ನಮೂದಿಸಲಾಗಿದೆ ಎಂದರೆ ನಿಜ. ದಿನಾಂಕ 20.03.2020 ರಂದು ನಾನು ಪೊಲೀಸ ಠಾಣೆಗೆ ಹೊಗಿಲ್ಲ ಅಲ್ಲಿ ಯಾವುದೇ ಚಿನ್ನದ ಚೈನನ್ನು ತೂಕ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸ ಠಾಣೆಯಲ್ಲಿ 3 ಮೊಬೈಲ ಫೋನಗಳು, ಒಂದು ಮೋಟರ ಸೈಕಲ ಮತ್ತು ಒಂದು ಚಿನ್ನದ ಚೈನ ಇತ್ತು ಎಂದು ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ. 10 ಗ್ರಾಂ ನ ಚೈನು ತೆಳು ಇರುತ್ತದೆ ಎಂದರೆ ನಿಜ. 10 ಗ್ರಾಂನ ಚೈನು ಕೊರಳಲ್ಲಿದ್ದಾಗ ಬೇರೆಯಾರಾದರು ಆ ಚೈನನ್ನು ಹಿಡಿದು ಜಗ್ಗಿದರೆ ಚೈನು ತುಂಡಾಗುತ್ತದೆ ಎಂದರೆ ನಿಜ. ದಿನಾಂಕ 20.03.2020 ರಂದು ಚೇತನ ಪೊಲೀಸ ನನ್ನನ್ನು ಪೊಲೀಸ ಠಾಣೆಗೆ ಕರೆದರೆಂದು ಅಲ್ಲಿ ನಾನು ಸಿಪಿಐರವರಿಗೆ ಚಿನ್ನದ ಚೈನನ್ನು ತೂಕ ಮಾಡಿ ಕೊಟ್ಟೆನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಆರೋಪಿತರಿಗೆ ನಾನು ಪೊಲೀಸ ಠಾಣೆಯಲ್ಲಿ ನೋಡಿದ್ದೆನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಈ ಕೇಸಿಗೆ ಅನುಕೂಲವಾಗಲೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಸಹ ನಿಲ್ಲಿಸಿ ವಸ್ತುವಿನೊಂದಿಗೆ ಫೊಟೋ ತೆಗೆದಿದ್ದರು.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4 ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು (ಪಿಸಿಎ) ಬೆಳಗಾವಿ.